ಉತ್ತರಭಾರತದ ಹಿಂದೀ ಪರಿಸರದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳ ರಾಯಭಾರಿಯ ರೀತಿಯಲ್ಲಿ ಕೆಲಸ ಮಾಡಿದ್ದಾರೆಂದರೆ ಅದು ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ.

ಇಸ್ರೋ, ಮಾನವ ಸಂಪನ್ಮೂಲ ಸಚಿವಾಲಯ, ದೂರದರ್ಶನ, ಆಕಾಶವಾಣಿ, ಹಾಗೂ ಹಲವಾರು ವಿಶ್ವವಿದ್ಯಾಲಯಗಳು ಇವರನ್ನು ಸದಸ್ಯರಾಗಿ, ಸಲಹೆಗಾರರಾಗಿ ಮಾಡಿಕೊಂಡು ಇವರ ಅನುಭವದ ಪ್ರಯೋಜನ ಪಡೆದುಕೊಂಡಿವೆ.

ಅಪಾರವಾದ ಪಾಂಡಿತ್ಯ, ಪ್ರತಿಭೆ, ಪರಿಶ್ರಮಗಳ ಜೊತೆಗೆ, ಸತತವಾದ ತೊಡಗಿಕೊಳ್ಳುವಿಕೆಯನ್ನು ಅಪೇಕ್ಷಿಸುವ ನಿಘಂಟಿನ ಕೆಲಸವನ್ನೂ ತುಂಬ ಮಾಡಿದ್ದಾರೆ. ಬಹಳ ಮುಖ್ಯವಾಗಿ ಹೇಳ ಬೇಕಾದದ್ದು, 'ವಚನ ಪದ ಸಂಪದ' ಎಂಬ 'ಬಸವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ' ಪ್ರಕಟಿಸಿರುವ ಒಂದು ಸಾವಿರಕ್ಕೂ ಹೆಚ್ಚು ಪುಟಗಳ 1/4ಕ್ರೌನ್ ಆಕಾರದ ಕನ್ನಡ-ಹಿಂದಿ-ಇಂಗ್ಲಿಷ್ ತ್ರಿಭಾಷಾ ನಿಘಂಟಿನ ಸಂಪಾದನೆ. ಅದರಲ್ಲಿ ಬರುವ ಎಲ್ಲ ಕನ್ನಡದ ಶಬ್ದಗಳಿಗೆ ಹಿಂದೀ ತತ್ಸಮಾನ ಶಬ್ದಗಳನ್ನು ನೀಡಿದ ಶ್ರೇಯಸ್ಸು ಪ್ರೊ. ಲಲಿತಾಂಬ ಅವರದ್ದು. ಇದಲ್ಲದೆ ಕನಕ ಸಂಪುಟದಲ್ಲಿನ ಕನ್ನಡ ಶಬ್ದಗಳಿಗೆ ನಿಘಂಟು ಸಿದ್ಧ ಪಡಿಸುವಲ್ಲಿಯೂ ಅವರ ಶ್ರಮ-ಪರಿಶ್ರಮಗಳಿವೆ. ಆಡಳಿತ ಪದಕೋಶ, ರಾಧಾ ಕೃಷ್ಣ ಭಕ್ತಕವಿ ಕೋಶದ ರಚನೆ ಇವು ವಿಶೇಷವಾಗಿ ಹೆಸರಿಸಬೇಕಾದಂಥವು. ಇವುಗಳ ಜೊತೆಗೆ ಹಿಂದಿಯಲ್ಲಿ 'ಫಿರ್ ನಯಾ ದಿನ್' ಎಂಬ ಕವನ ಸಂಕಲನ, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಹಿಂದಿಯಲ್ಲಿ, ಕನ್ನಡದಲ್ಲಿ, ಮಂಡಿಸಿದ, ಹಿಂದಿ-ಕನ್ನಡ ಕುರಿತು, ಭಾಷಾ ವಿಜ್ಞಾನ ಸಂಬಂಧವಾದ ಅನೇಕ ಸಂಶೋಧನಾ ಲೇಖನಗಳು, ಪ್ರೌಢ ಲೇಖನಗಳನ್ನು ರಚಿಸಿದ್ದಾರೆ. ಒಟ್ಟಾರೆ ಸ್ವರಚಿತ, ಅನುವಾದಿತ, ಸಂಪಾದಿತ ಗ್ರಂಥಗಳು ಎಲ್ಲ ಸೇರಿ 70ನ್ನೂ ಮೀರುತ್ತವೆ. ಲಲಿತಾಂಬ ಅವರ ಈ ಬಹುಮುಖವಾದ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಹಲವಾರು ಹೆಸರಾಂತ ಸಂಸ್ಥೆ, ಸರ್ಕಾರಗಳಿಂದ ಬಂದಿರುವ ಪುರಸ್ಕಾರಗಳು ಕೂಡ ಕಡಿಮೆಯೇನಲ್ಲ. ಅವುಗಳ ಸಂಖ್ಯೆ 200ಕ್ಕೂ ಹೆಚ್ಚು.

ಪ್ರಮುಖವಾದ ಕೆಲವನ್ನು ಹೆಸರಿಸುವುದಾದರೆ, ದಕ್ಷಿಣ ಆಫ್ರಿಕಾದಲ್ಲಿ ನಡೆದ ಒಂಬತ್ತನೇ ವಿಶ್ವ ಹಿಂದೀ ಸಮ್ಮೇಳನದಲ್ಲಿ 'ವಿಶ್ವ ಹಿಂದೀ ಸಮ್ಮಾನ', (2012) ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಜೀವಮಾನ ಸಾಧನೆಯ ವಿಶೇಷ ಗೌರವ ಪುರಸ್ಕಾರ(2013), ಬಿಹಾರ ರಾಷ್ಟ್ರಭಾಷಾ ಪರಿಷತ್ತಿನ 'ಸಾಹಿತ್ಯ ಸಾಧನಾ ಸಮ್ಮಾನ' (1994), 1986ರಲ್ಲಿ 'ವಚನೋದ್ಯಾನ' ಅನುವಾದಕ್ಕೆ ಕೇಂದ್ರೀಯ ಹಿಂದೀ ನಿರ್ದೇಶನಾಲಯದ ಸಮ್ಮಾನ, ಅದೇ ಪುಸ್ತಕಕ್ಕೆ 1992ರಲ್ಲಿ ಕರ್ನಾಟಕ ಸರಕಾರದಿಂದ ಪುರಸ್ಕಾರ, ಉತ್ತರ ಪ್ರದೇಶದ ಹಿಂದೀ ಸಾಹಿತ್ಯ ಸಂಸ್ಥಾನದಿಂದ 'ಸೌಹಾರ್ದ ಸಮ್ಮಾನ' (1988), 1997 ರಲ್ಲಿ 'ದಿಲ್ಲೀ ಕನ್ನಡಿಗ ಸನ್ಮಾನ', 1998ರಲ್ಲಿ ಶಾಂತಿನಿಕೇತನದ ವಿಶ್ವಭಾರತಿಯಿಂದ 'ರಾಜಭಾಷಾ ಸಮ್ಮಾನ', ಭಾರತೀಯ ಅನುವಾದ ಪರಿಷತ್ತಿನ 'ದ್ವಿವಾಗೀಶ ಸಮ್ಮಾನ', ಕೇಂದ್ರೀಯ ಹಿಂದೀ ನಿರ್ದೇಶನಾಲಯದ ಹಿಂದೀಯೇತರ ಭಾಷೀ ಹಿಂದೀ ಲೇಖಕ ಸಮ್ಮಾನ (1986), ಸ್ವಯಂ ರಾಷ್ಟ್ರಪತಿಗಳೇ ಪ್ರದಾನಮಾಡಿದ ಕೇಂದ್ರೀಯ ಹಿಂದೀ ಸಂಸ್ಥಾನದ 'ಗಣೇಶ ಶಂಕರ ವಿದ್ಯಾರ್ಥಿ ಪುರಸ್ಕಾರ' (2016), 'ಮೇಘ ರಾಗ' ಅನುವಾದಿತ ಕಾದಂಬರಿಗೆ ಕರ್ನಾಟಕ ಲೇಖಕಿಯರ ಸಂಘದ ಪುರಸ್ಕಾರ, ಇವು ಕೆಲವು ಮಾತ್ರ.

ಅನುವಾದ ಅತ್ಯಂತ ಶ್ರಮದಾಯಕವಾದ ಕೆಲಸ. ಅನುವಾದ ಯಶಸ್ವಿಯಾದರೆ ಮೂಲ ಲೇಖಕನಿಗೆ ಕೀರ್ತಿ, ಅಯಶಸ್ವಿಯಾದರೆ ಅನುವಾದಕನನ್ನು ಹೊಣೆಮಾಡಲಾಗುತ್ತದೆ. ಇಷ್ಟಾದರೂ ಅನುವಾದ ಬೇಕೇ ಬೇಕು. ಕನ್ನಡ ಸಾಹಿತ್ಯದ ಸವಿಯನ್ನು ಹಿಂದೀಯರಿಗೆ ಉಣಬಡಿಸುವ ಮತ್ತು ಹಿಂದೀ ಸಾಹಿತ್ಯದ ಸೊಗಸನ್ನು ಕನ್ನಡಿಗರಿಗೆ ಉಣಬಡಿಸುವ ಈ ಕೊಳುಕೊಡೆಯ ಅಸಿಧಾರಾವ್ರತದ ಕಾರ್ಯವನ್ನು ಸರಿ ಸುಮಾರು 60 ವರ್ಷಗಳಿಂದ ನಿರಂತರವಾಗಿ ಮಾಡುತ್ತ ಬಂದಿರುವ ಈ ಧೀಮಂತ ಚೇತನ ತನ್ನ ಈ ಕಾರ್ಯವನ್ನು ಸಾರೋದ್ಧಾರವಾಗಿ ಇನ್ನೂ ಹಲವಾರು ವರ್ಷಗಳ ಕಾಲ ಮುಂದುವರೆಸಿಕೊಂಡು ಹೋಗುವ ಮಟ್ಟಿನ ಆರೋಗ್ಯ ಮತ್ತು ಆಯುಷ್ಯ ಅವರದಾಗುವಂತೆ ಕರುಣಿಸಲೆಂಬುದೇ ಭಾಷಾ ಭಾರತಿಯಲ್ಲಿ ಸಾಹಿತ್ಯಾಭಿಮಾನಿಗಳ ಕೋರಿಕೆ.

●